೭೭೫ ಜನರಿಗೆ ಮೇವು ಅಭಿವೃದ್ಧಿಯಲ್ಲಿ
೪೦೦ ಗಿರಿ ಜನರಿಗೆ ಜೇನು ಸಾಕಾಣಿಕೆಯಲ್ಲಿ ತರಬೇತಿ ನೀಡಲಾಗಿದೆ.

ವಿಷಯ:- ಖಾಸಗಿ ತಾಂತ್ರಿಕ ಕಾಲೇಜುಗಳಲ್ಲಿ ಕ್ಯಾಪಿಟೇಷನ್ ಶುಲ್ಕ ವಸೂಲಿ.

ಚುಕ್ಕೆ ರಹಿತ ಪ್ರಶ್ನೆ ೬೫:- (೫೦೪೮)
ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)
ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧. ಖಾಸಗಿಯವರು ನಡೆಸುತ್ತಿರುವ ತಾಂತ್ರಿಕ ಕಾಲೇಜುಗಳಲ್ಲಿ ಕ್ಯಾಪಿಟೇಷ್ನ್ ಶುಲ್ಕ ವಸೂಲು ಮಾಡುತ್ತಿರುವುದು ಸರ್ಕಾರದ ಗಮನಕ್ಕೆಬಂದಿದೆಯೇ?

ಶ್ರೀ. ಎಸ್.ಎಂ. ಯಾಹ್ಯ.
(ಉನ್ನತ ಶಿಕ್ಷಣ ಸಚಿವರು)

ಇಲ್ಲ.

ವಿಷಯ:- ಕರ್ನಾಟಕದಲ್ಲಿ ಗಂಧದ ಮರ ಬೆಳೆಯುವ ಪ್ರದೇಶಗಳು .

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೬೬:- (೫೧೫)
ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)
ಮಾನ್ಯ ರಾಜ್ಯ ಅರಣ್ಯಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಕರ್ನಾಟಕದಲ್ಲಿ ಗಂಧದ ಮರ ಬೆಳೆಯುವ ಪ್ರದೇಶಗಳು ಯಾವುವು?
(ಆ) ಗಂಧದ ಮರ ಲೂಟಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?
(ಇ) ಗಂಧದ ಮರಗಳನ್ನು ಸರ್ಕಾರ ಬೆಳೆಸಲು ಕೈಗೊಂಡ ಕ್ರಮಗಳೇನು?

ಶ್ರೀ.ಎಂ.ಪಿ. ಕೇಶವಮೂರ್ತಿ
(ಅರಣ್ಯ ರಾಜ್ಯ ಸಚಿವರು)

ಕರ್ನಾಟಕದ ಮರಳುಗಾಡು ಪ್ರದೇಶ ಬಿಟ್ಟು ಮಿಕ್ಕ ಎಲ್ಲಾ ತರಹದ ಕಾಡುಗಳಲ್ಲಿ ಶ್ರೀಗಂಧದ ಮರಗಳು ಬೆಳೆಯುತ್ತವೆ. ಖಾಸಗಿ ಜಮೀನಿನಲ್ಲಿಯೂ ಸಹ ಶ್ರೀಗಂಧದ ಮರಗಳು ಬೆಳೆಯುತ್ತವೆ.

ಶ್ರೀಗಂಧದ ಮರಗಳ ಕಳ್ಳ ಸಾಗಾಣಿಕೆ ಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಇದನ್ನು ತಪ್ಪಿಸಲು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ.

ವಿವಿಧ ಪಂಚವಾರ್ಷಿಕ ಯೋಜನೆಯನ್ವಯ ಅದರಲ್ಲೂ, ಮುಖ್ಯವಾಗಿ ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ರಾಜ್ಯಾದ್ಯಂತ ಅನೇಕ ಅರಣ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಂಡು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಶ್ರೀಗಂಧದ ಮರಗಳನ್ನು ಬೆಳೆಸಲಾಗುತ್ತಿದೆ. ಇತರೇ ನೆಡು ತೋಪುಗಳನ್ನು ನಿರ್ಮಿಸುವಾಗ ಪಾಲಿಥಿನ್ ಚೀಲಗಳಲ್ಲಿ ಬೆಳೆಸಿದ ಶ್ರೀಗಂಧದ ಸಸಿಗಳನ್ನು ಅದರ ಜೊತೆ ನೆಡಲಾಗುವುದು. ಪೊದೆಗಳಲ್ಲಿ ಶ್ರೀಗಂಧದ ಬೀಜವನ್ನು ಬಿತ್ತಲಾಗುವುದು. ರಾಜ್ಯದಲ್ಲಿ ಈವರೆಗೆ ೧,೩೦೦ ಹೆಕ್ಟೇರ್ ಪ್ರದೇಶದಲ್ಲಿ ಶ್ರೀಗಂಧದ ನೆಡುತೋಪುಗಳನ್ನು ಬೆಳೆಸಲಾಗಿದೆ. ಖಾಸಗೀ ಕ್ಷೇತ್ರದಲ್ಲಿಯೂ ಸಹ ಶ್ರೀಗಂಧದ ಸಸಿಗಳನ್ನು ಉಚಿತವಾಗಿ ವಿತರಣೆ ಮಾಡಿ ಅದನ್ನು ಬೆಳೆಸಲು ಪ್ರೋತ್ಸಾಹಿಸಲಾಗುತ್ತಿದೆ.